# ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.

ಸಿ.ಸಿ. ನಂ.67/2023

ಪಿ.ಡಬ್ಯೂಃ5

ಸಿಡಬ್ಲ್ಯೂ-6

ಸಾಕ್ಷಿದಾರರ ಹೆಸರು : ಮಂಜುನಾಥ ನಾವಿ

ತಂದೆಯ ಹೆಸರು : ಗಿಡ್ಡಪ್ಪ ನಾವಿ

ವಯಸ್ಸು : 49 ವರ್ಷ

ಉದ್ಯೋಗ : ಉಪ ಅರಣ್ಯ ಸಂರಕ್ಷಣಾಧಿಕಾರಿ , ಸಾಮಾಜಿಕ ಅರಣ್ಯ ವಿಭಾಗ, ಕಾರವಾರ

ವಾಸ : ಕಾರವಾರ

ದಿನಾಂಕಃ 19-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರದ ಪರವಾಗಿ ಸ .ಸ. ಆ ರವರಿಂದ ಃ**

1. ನಾನು ದಿನಾಂಕಃ 06-06-2020 ರಿಂದ ದಿನಾಂಕಃ 21-4-2022 ರ ತನಕ ಅಂಕೋಲಾ ಉಪ ವಿಭಾಗ ಅಂಕೋಲಾ ವಲಯದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕಾರ್ಯ ನಿರ್ವಹಿಸಿದ್ದೇನೆ .

2. ಈ ಪ್ರಕರಣದಲ್ಲಿ ದಿಃ 5-1-2022 ರಂದು ರಾಮನಗುಳಿ ವಲಯದ ಕಂಬಾಣಿ ಅರಣ್ಯ ಸರ್ವೆ ನಂಬರ 16 ರಲ್ಲಿ ಒಂದು ಕಾಡು ಹಂದಿಯನ್ನು ವಿದ್ಯುತ್ ತಂತಿಯನ್ನು ಹರಿಸಿ ಒಂದು ಕಾಡು ಹಂದಿ ಯನ್ನು ಕೊಂದು ಮದ್ದನ ಮನೆ ನಾಲಾದಲ್ಲಿ ಅದರ ಮಾಂಸವನ್ನು ತಯಾರಿಸುವ ಸಮಯದಲ್ಲಿ ನಮ್ಮ ಸಿಬ್ಬಂದಿಗಳು ದಾಳಿ ಮಾಡಿ ಅದರಲ್ಲಿ ಇದ್ದ 4 ಜನರಲ್ಲಿ 2 ಜನ ಆರೋಪಿ ಸಿಕ್ಕಿರುತ್ತಾರೆ. ಅವರುಗಳ ಹೆಸರು ಸಾಣು ಮೋಹನ ಸಿದ್ದಿ ಮತ್ತು ಕಮಲಾಕರ ಸಾಣು ಸಿದ್ದಿ 1 ಮತ್ತು 2 ಅರೋಪಿತರಾಗಿದ್ದು ಅವರನ್ನು ದಸ್ತುಗಿರಿ ಮಾಡಿ ಬಂಧಿಸಲಾಗಿತ್ತದೆ. 3 ಮತ್ತು 4 ಆರೋಪಿತರು ತಪ್ಪಿಸಿಕೊಂಡು ಓಡಿ ಹೋಗಿರುತ್ತಾರೆ . ಸತ್ತ ಕಾಡುಹಂದಿಯ ಮಾಂಸ ಹಾಗೂ ಇತರ ಪರಿಕರಗಳನ್ನು ಹಾಗೂ ಸದ್ರಿ ಕಾಡು ಹಂದಿಯನ್ನು ಕೊಲ್ಲಲು ಉಪಯೊಗಿಸಿದ 10 ಮೀಟರ ತಂತಿಯನ್ನು ವಶಕ್ಕೆ ಪಡಿಸಿಕೊಳ್ಳಲಾಗಿತ್ತು. ನಂತರ ವಲಯ ಅರಣ್ಯ ಅಧಿಕಾರಿಗಳು ಹಿಲ್ಲೂರು ಪಶು ವೈದ್ಯಾಧಿಕಾರಿಗಳನ್ನು ಕರೆಸಿ ಅದರ ಪೊಸ್ಟ ಮಾರ್ಟಮ ಮಾಡಿಸಿರುತ್ತಾರೆ .

3. ಮಾನ್ಯ ನ್ಯಾಯಾಧೀಶರ ಅನುಮತಿ ಪಡೆದುಕೊಂಡು ಸತ್ತ ಪ್ರಾಣಿಯ ಮಾಂಸ ಕೊಳೆತು ಹೋಗುವ ಸಾಧ್ಯತೆ ಇರುವುದರಿಂದ ಅದನ್ನು ನಾಶ ಪಡಿಸಲು ಅನುಮತಿಯನ್ನು ಪಡೆದು ಕೊಳ್ಳಲಾಗಿರುತ್ತದೆ . ದಿಃ 7-1-2022 ರಂದು ಬೆಳಿಗ್ಗೆ 8-00 ಗಂಟೆಗೆ ನಾನು ಸಹ ಅಲ್ಲಿಗೆ ಹೋಗಿದ್ದೆ . ಆ ದಿನ ಪಂಚರ ಸಮಕ್ಷ್ಮ ವಿಧಿವತ್ತಾಗಿ ನನ್ನ ಉಪಸ್ಥಿತಿಯಲ್ಲಿ ಅದನ್ನು ಸುಟ್ಟಿ ನಂತರ ಪಂಚನಾಮೆ ಕ್ರಮ ಜರುಗಿಸಿರುತ್ತೇವೆ ಈ ಎಲ್ಲ ಕ್ರಮವನ್ನು ಬೆಳಿಗ್ಗೆ 8-00 ಗಂಟೆಯಿಂದ 9-45 ಆಗಿರುತ್ತದೆ . ಸಾಕ್ಷಿಗೆ ಈಗಾಗಲೇ ಗುರುತಿಸಲಾಗಿರುವ ನಿಪಿ-11 ನ್ನು ತೋರಿಸಲಾಗಿದ್ದು ಸಾಕ್ಷಿ ಅದರಲ್ಲಿರುವ ಸಹಿ ನೋಡಿ ಗುರುತಿಸಿರುವುದರಿಂದ ನಿಪಿ-11 (ಡಿ) ಎಂದು ಗುರುತಿಸಲಾಯಿತು . ಸದ್ರಿ ಸಮಯದಲ್ಲಿ ಪೊಟೊ ತೆಗೆದು GPS ರಿಡಿಂಗ ನ್ನು ರೆಕಾರ್ಡ ಮಾಡಿರುತ್ತೇವೆ. ಸಾಕ್ಷಿ ಈಗಾಗಲೇ ಗುರುತಿಸಲಾಗಿರುವ ನಿಪಿ-12 ರಿಂದ 14 ರ ಪೊಟೊ ತೋರಿಸಲಾಗಿದ್ದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ . ನಂತರ ಸದ್ರಿ ಆರೋಪಿತರಿಗೆ ದಿಃ 16-3-2022 ರಂದು ನಾನು ನೋಟಿಸನ್ನು ನೀಡಿರುತ್ತೇನೆ . ದಿಃ 21-3-2022 ರಂದು ವಿಚಾರಣೆಗೆ ಹಾಜರಾಗಬೇಕು ಎಂದು ಆ ನೋಟಿಸನಲ್ಲಿ ತಿಳಿಸಿರುತ್ತೆನೆ . ದಿಃ21-3-2022 ರಂದು 1 ರಿಂದ 4 ಆರೋಪಿತರು ವಿಚಾರಣೆಗೆ ಬಂದು ಹಾಜರಾಗಿರುತ್ತಾರೆ . ಸದ್ರಿ ವಿಚಾರಣೆ ಸಮಯದಲ್ಲಿ 4 ಜನ ಆರೋಪಿತರು ನನ್ನ ಮುಂದೆ ಹೇಳಿಕೆ ನೀಡಿರುತ್ತಾರೆ ಆ ಹೇಳಿಕೆ ಯನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ಅವುಗಳನ್ನು ನಿಪಿ-18 ರಿಂದ 21 ಎಂದು ಗುರುತಿಸಲಾಯಿತು . ಸಾಕ್ಷಿಯ ಸಹಿಯನ್ನು ನಿಪಿ-18 (ಎ) ಯಿಂದ 21 (ಎ) ಎಂದು ಗುರುತಿಸಲಾಯಿತು. ನಂತರ ಈ ಪ್ರಕರಣದ ಕಾರ್ಯದಲ್ಲಿ ಕೈಗೊಂಡ ಸಿಬ್ಬಂದಿಗಳಾದ ಚಾಸಾ-1 ರಿಂದ 4 ನನ್ನ ಮುಂದೆ ಹೇಳಿಕೆ ನೀಡಿರುತ್ತಾರೆ . ನಂತರ ಎಪ್ರಿಲ ತಿಂಗಳನಲ್ಲಿ ನಾನು ಪದೊನ್ನತಿ ಹೊಂದಿ ಕಾರವಾರಕ್ಕೆ ವರ್ಗಾವಣೆ ಹೊಂದಿರುತ್ತೇನೆ ಆ ಕಾರಣದಿಂದ ಸದ್ರಿ ಕಡತವನ್ನು ಚಾಸಾ -7 ರವರಿಗೆ ಹಸ್ತಾಂತರಿಸಿರುತ್ತೇನೆ . ನ್ಯಾಯಾಲಯದ ಮುಂದೆ ಇರುವ 4 ಜನ ಆರೋಪಿತನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ . ನ್ಯಾಯಾಲಯದ ಮುಂದೆ ಇರುವ ಈಗಾಗಲೆ ಗುರುತಿಸಲಾಗಿರುವ ಮು. ಮಾ-1 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ .

**ಪಾಟೀ ಸವಾಲು ಃಶ್ರೀ ಆರೋಪಿ ಪರ ಆರ್ ಎನ್ ಎಚ್ ವಕೀಲರಿಂದಃ**

4. ವನ್ಯ ಜೀವಿಯ ಸಂರಕ್ಷಣಾ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಬೇಕಾಕಾದರೆ ಅದರ ಅರ್ಹತೆಗಳನ್ನು ನೋಡಿ ಪ್ರಕರಣ ದಾಖಲಿಸಬೇಕಾಗುತ್ತದೆ ಎಂದರೆ ಸರಿ . ಸದ್ರಿ ಪ್ರಕರಣನ್ನು ACF ರವರು ಮತ್ತು ಅವರಿಗಿಂತ ಕಡಿಮೆ ದರ್ಜೆ ಯವರು ಪ್ರಕರಣನ್ನು ದಾಖಲಿಸುವಂತಿಲ್ಲ ಎಂದರೆ ಸರಿಯಲ್ಲ . ಪೊರೆಸ್ಟರ ಅವರು ಸಹ ಪ್ರಕರಣ ವನ್ನು ದಾಖಲಿಸಬಹುದು ಎಂಬ ಬಗ್ಗೆ ಯಾವ ದಾಖಲತಿ ಇರುತ್ತದೆ ಎಂದರೆ ಕಲಂ 155 Cr.P.C ಅಡಿಯಲ್ಲಿ ಅದು ಉಲ್ಲೇಖವಾಗಿರುತ್ತದೆ . ಕಲಂ 55 ವನ್ಯಜೀವಿ ಸಂರಕ್ಷಣಾ ಕಾಯ್ದೆ ಅಡಿಯಲ್ಲಿ ACF ಮತ್ತು ಅವರಿಗಿಂತ ಕಡಿಮೆ ದರ್ಜೆಯ ಅಧಿಕಾರಿಗಳು ಪ್ರಕರಣ ದಾಖಲಿಸಲು ಅರ್ಹತೆ ಇರುವುದಿಲ್ಲ ಎಂದರೆ ಸರಿಯಲ್ಲ . ದಿಃ4-1-2022 ರಂದು ಅಥವಾ ದಿಃ5-1-2022 ರಂದು ಆ ದಿನ ಸದ್ರಿ ಕೃತ್ಯ ನಡೆಯಿತು ಎಂಬ ಸ್ಥಳದಲ್ಲಿ ಕರೆಂಟ ಇತ್ತೊ ಇಲ್ಲವೊ ಎಂದು ನೀವು ತಿಳಿದು ಕೊಂಡಿರುತ್ತಿರಾ ಎಂದರೆ ನಾನು ಆ ಬಗ್ಗೆ ತನಿಖೆ ಮಾಡಿಲ್ಲ . ಮದ್ದನ ಮನೆ ಕಮ್ಮಾಣಿ ಹಾಗೂ ಹಳವಳ್ಳಿ ಹಳ್ಳಿ ಪ್ರದೇಶ ಎಂದರೆ ಸರಿ . ಆ ಭಾಗದಲ್ಲಿ ಕರಂಟ ಇರುತ್ತದೆಯೊ ಇಲ್ಲವೊ ಎಂದು ನೀವು ತನಿಖೆ ಮಾಡಿರುತ್ತಿರಾ ಎಂದರೆ ಇಲ್ಲ . ಚಾಸಾ 1 ಮತ್ತು 4 ರವರು ನಮ್ಮ ಸಿಬ್ಬಂದಿಗಳು ಚಾಸಾ -2 ಮತ್ತು 3 ರವರು ನಮ್ಮ ಸಿಬ್ಬಂದಿಗಳು ಅಲ್ಲ . 2020 ರಿಂದ 2022 ರ ಸಾಲಿನಲ್ಲಿ ನಾನು ರಾಮಣಗುಳಿ ಅರಣ್ಯ ವಲಯಕ್ಕೆ ಬೇಟಿ ಕೋಟ್ಟಿರುತ್ತೇನೆ . ಚಾಸಾ -2 ವತ್ತು 3 ರವರು ರಾಮಣಗುಳಿಯ ಅರಣ್ಯ ವಲಯದಲ್ಲಿ ವಾಚಮನ್ ನೌಕರನಾಗಿ ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಅದು ಅಲ್ಲಿಯ ಉಪ ವಲಯ ಅರಣ್ಯ ಅಧಿಕಾರಿಗೆ ಸಂಬಂಧಿಸಿದ್ದು ಅವರು ಖಾಯಂ ವಾಗಿ ಅಥವಾ ದಿನಗೂಲಿಯ ಆಧಾರದಲ್ಲಿ ಅವರನ್ನು ನೇಮಿಸಿಕೊಳ್ಳಬಹುದು . ಚಾಸಾ 1 ಮತ್ತು 4 ರವರು ಆ ದಿನ ಕರ್ತವ್ಯ ದಲ್ಲಿ ಇದ್ದರಾ ಎಂಬ ಬಗ್ಗೆ ಅವರ ಹಾಜರಾತಿ ಪುಸ್ತಕ ಪಡೆದುಕೊಂಡಿರುತ್ತಿರಾ ಎಂದರೆ ಅದನ್ನು ವಲಯ ಅರಣ್ಯಾಧಿಕಾರಿ ಗಳು ತೆಗೆದುಕೊಂಡಿರುತ್ತಾರೆ ನಾನು ತೆಗೆದುಕೊಂಡಿಲ್ಲ ನಾನು ಹೇಳಿಕೆ ಮಾತ್ರ ತೆಗೆದುಕೊಂಡಿರುತ್ತೇನೆ . ಅದೇ ರೀತಿ ಚಾಸಾ 1 ಮತ್ತು 4 ಎಲ್ಲೆಲ್ಲಿ ಅವರು ಕರ್ತವ್ಯ ನಿರ್ವಹಿಸುತ್ತಾರೆ ಎಂಬ ಬಗ್ಗೆ ದಿನಚರಿ ಕೊಡಬೇಕಾಗಾತ್ತದೆ ಎಂದರೆ ಸರಿ . RFO ರವರಿಗೆ ಕಳುಹಿಸಿದ ದಿನಚರಿ ನೋಡಿ ಅವರು ಯಾವ ಯಾವ ,ಸಿಬ್ಬಂದಿಗಳನ್ನು ಎಲ್ಲೆಲ್ಲಿ ಕಳುಹಿಸಬೇಕು ಎಂದು ನಿಗದಿ ಪಡಿಸುತ್ತಾರೆ ಎಂದರೆ RFO ರವರು ಅದರ ಕಂಟ್ರೊಲ ದಲ್ಲಿ ಇರುತ್ತಾರೆ ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ . ದಿಃ5-01-2022 ಚಾಸಾ

–1 ಮತ್ತು 4 ರವರು ಕರ್ತವ್ಯ ದಲ್ಲಿ ಇದ್ದರೊ ಇಲ್ಲವೊ ಎಂಬ ಬಗ್ಗೆ ದಿನಚರಿ ನೋಡಿರುತ್ತಿರಾ ಎಂದರೆ ಅದು RFO ರವರ ತಾಬಾದಲ್ಲಿ ಇರುತ್ತದೆ. ಆದರೆ ಆ ದಿನ ಚಾಸಾ –1 ಮತ್ತು 4 ರವರು ತಮ್ಮ ಕರ್ತ್ಯವ್ಯ ದಲ್ಲಿ ಇದ್ದರು . ಚಾಸಾ –1 ಮತ್ತು 4 ರವರು ಆ ದಿನ ಕರ್ತ್ಯ ದಲ್ಲಿ ಇರಲಿಲ್ಲ ಹಾಗಾಗಿ ನೀವು ಆ ದಿನಚರಿಯನ್ನು ನ್ಯಾಯಾಲಯಕ್ಕೆ ಹಾಜರ ಪಡಿಸಿಲ್ಲ ಎಂದರೆ ಸರಿಯಲ್ಲ . ಅದು ವಲಯ ಅರಣ್ಯಾಧಿಕಾರಿಗಳ ತಾಬಾದಲ್ಲಿ ಇರುತ್ತದೆ . ನ್ಯಾಯಾಲಯದ ಮುಂದೆ ಇರುವ ಮು.ಮಾ–1 ರ ಪ್ರಕಾರ ನೇರವಾಗಿ ತಂತಿಯನ್ನು ವಿದ್ಯುತ್ ಲೈನ ಗೆ ಹಾಕಲು ಬರುವುದಿಲ್ಲ ಅದಕ್ಕೆ ಸರ್ವಿಸ್ ಲೈನ ಹಾಕಿ ಅಳಡಿಸಬೇಕಾಗುತ್ತದೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ . ಸಾಮಾನ್ಯವಾಗಿ ಒಂದು ವಿದ್ಯುತ್ ಲೈನಗೆ ಹಸಿ ಕಟ್ಟಿಗೆ , ಒಣ ಕಟ್ಟಿಗೆ ಅಥವಾ ಯಾವುದೇ ಒಂದು ಕಬ್ಬಿಣದ ತಂತಿಯನ್ನು ಲೈನ್ ಗೆ ಹಾಕಿದ್ದಲ್ಲಿ ಅಥವಾ ತಾಗಿದ್ದಲ್ಲಿ ಸದ್ರಿ ಲೈನ ನ ಡಿವೈಸ್ ಅಥವಾ ಫ್ಯೂಸ್ ಹಾರಿ ಹೋಗುತ್ತದೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ . ನ್ಯಾಯಾಲಯದ ಮುಂದೆ ಇರುವ ಮು.ಮಾ–1 ನಿಮ್ಮ ಕಚೇರಿಯಲ್ಲಿ ಸಿಗುತ್ತದೆ ಎಂದರೆ ಸರಿಯಲ್ಲ . ಮುಮಾ–1 ರಂತಹ ತಂತಿ ನಿಮಗೆ ಸಿಕ್ಕಿದಾಗ ಅದು ಯಾವ ಸರ್ವೆ ನಂಬರಗೆ ಸಂಭಂಧಿಸಿದ್ದು ಮತ್ತು ಯಾರ ಮನೆಗೆ ಸಂಭಂಧಿಸಿದ್ದು ಎಂದು ಅದರ ಬಗ್ಗೆ ತನಿಖೆ ಮಾಡಲು ತೊಂದರೆ ಇತ್ತಾ ಎಂದರೆ ಇಲ್ಲ . ದಿಃ7–1–2021 ರಂದು ನೀವು ಹೇಳಿದ ಸ್ಥಳಕ್ಕೆ ಹೋಗಿ ಪಂಚನಾಮೆ ಮಾಡಿದ್ದು ಇಲ್ಲ , ಪೊಟೊ ಹೊಡೆದದ್ದು ಇಲ್ಲ ಎಂದರೆ ಸರಿಯಲ್ಲ . ನೀವು ಕೊಟ್ಟಿದ್ದ ನೋಟಿಸನಂತೆ ಆರೋಪಿತರು ದಿಃ21–3–2022 ರಂದು ವಿಚಾರಣೆ ಗೆ ನಿಮ್ಮ ಮುಂದೆ ಹಾಜರರಾಗಿದ್ದರು ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅದರಂತೆ ನೀವು ಆರೋಪಿಯಿಂದ ತಪ್ಪೊಪ್ಪಿಗೆ ಹೇಳಿಕೆಯನ್ನು ನೀವೆ ಬರೆದುಕೊಂಡು ಅವರೆ ಹೇಳಿಕೆ ನೀಡಿದ್ದು ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . .ದಿಃ23–3–2022 ರಂದು ಆರೋಪಿತರು ನಿಮ್ಮ ಮುಂದೆ ತಪ್ಪೊಪ್ಪಿ ಕೊಂಡಿದ್ದು ಇಲ್ಲ ಆ ರೀತಿಯಾದ ಹೇಳಿಕೆ ನೀಡಿದ್ದು ಇಲ್ಲ ಎಂದರೆ ಸರಿಯಲ್ಲ . ಸದ್ರಿ ಹಂದಿಯನ್ನು ನಾಶ ಪಡಿಸುವ ಪೂರ್ವದಲ್ಲಿ ಅದು ಯಾವ ಸ್ಥಿತಿಯಲ್ಲಿ ಇತ್ತು ಎಂದರೆ ಅದು ಮರಣ ಹೊಂದಿತ್ತು ಅರ್ಧ ಸುಟ್ಟ ಸ್ಥಿತಿಯಲ್ಲಿ ಇತ್ತು . ಯಾವುದೆ ಹಂದಿಯನ್ನು ಸುಟ್ಟರೆ ಅದರ ಚರ್ಮ ಸುಟ್ಟು ಹೋಗಿ ಇರುತ್ತದೆ ಎಂದರೆ ಸರಿ . ಸದ್ರಿ ಹಂದಿಯನ್ನು ಸುಟ್ಟ ನಂತರ ಅದರ ಮಾಂಸವು ಸಹ ಕಂದು ಬಣ್ಣಕ್ಕೆ ತಿರುಗುತ್ತದೆ ಎಂದರೆ ನನಗೆ ನೆನಪಿಲ್ಲ . ವನ್ಯ ಜೀವಿ

ಸಂರಕ್ಷಣಾ ಕಾಯ್ದೆ ಅಡಿಯಲ್ಲಿ ತನಿಖೆಯನ್ನು ACF ರವರು ಮಾಡಬೇಕು ಎಂದು ಇರುತ್ತದೆ ಹಾಗೆನಿಲ್ಲ ಸಹಾಯಕ ತನಿಖಾಧಿಕಾರಿಯಾಗಿ RFO ಮಾಡಬಹುದು . ಸದ್ರಿ ಪ್ರಕರಣದ ಬಗ್ಗೆ ನನಗೆ ದಿಃ6-1-2022 ರಂದು ಹೇಳಲಾಗಿರುತ್ತದೆ . ಸದ್ರಿ ಮಾಹಿತಿ ತಿಳಿದ ನಂತರ ನಿಮ್ಮ ಪ್ರಕಾರ ನೀವು ಸ್ಥಳಕ್ಕೆ ಹೋಗಿ ತನಿಖೆ ಮಾಡಲು ತೊಂದರೆ ಇತ್ತಾ ಎಂದರೆ ಆಗಲೆ RFO ರವರ ಎಲ್ಲಾ ಪರಿಕರಗಳನ್ನು ವಶಕ್ಕೆ ಪಡೆದುಕೊಂಡಿದ್ದರು ಹಾಗೂ ಈ ಪ್ರಕರಣದ ತನಿಖೆ ಮುಂದುವರೆಸಿದ್ದರು . ವನ್ಯ ಜೀವಿ ಸಂರಕ್ಷಣಾಧಿಕಾರಿ ಕಾಯ್ದೆ ಅಡಿಯಲ್ಲಿ RFO ರವರಿಗೆ ತನಿಖೆ ಮಾಡುವ ಅಧಿಕಾರ ಇಲ್ಲ ಅದನ್ನು ACF ರವರು ಮಾಡಬೇಕು ಎಂದರೆ ಸರಿಯಲ್ಲ . ಎಲ್ಲೊ ಒಂದು ಸತ್ತ ಆ ಕಾಡುಹಂದಿಯನ್ನು ಈ ಪ್ರಕರಣ ದಲ್ಲಿ ಹಾಜರ ಪಡಿಸಿ ಅಮಾಯಕರಾದ ಆರೋಪಿತರ ಮೇಲೆ ಸುಳ್ಳು ಪ್ರಕರಣ ಹಾಕಲಾಗಿರುತ್ತದೆ ಎಂದರೆ ಸರಿಯಲ್ಲ . ಈ ಹಿಂದೆ ಸಿದ್ದಿ ಜನಾಂಗದವರು ಅರಣ್ಯಾಧಿಕಾರಿಗಳಾದ ಚಾಸಾ 1 ರವರು ಸರಿಯಾದ ಕೆಲಸ ಮಾಡುವುದಿಲ್ಲ ಎಂದು ಒಂದು ದೂರನ್ನು ಕೊಟ್ಟಿದ್ದರು ಆ ಕಾರಣದಿಂದಲೇ ಸಿದ್ದಿ ಜನಾಂಗದ ಮೇಲೆ ಚಾಸಾ 1 ರವರು ದ್ವೇಷ ಇಟ್ಟು ಕೊಂಡು ಈ ಪ್ರಕರಣ ಸೃಷ್ಟಿ ಮಾಡಿದ್ದು ಎಂದರೆ ಸರಿಯಲ್ಲ . ನೀವು ದಿಃ7-1-2022 ರಂದು ಸ್ಥಳಕ್ಕೆ ಹೋದದ್ದು ಇಲ್ಲ ಸದ್ರಿ ಹಂದಿ ನಾಶ ಪಡಿಸಿದ್ದು ಇಲ್ಲ ಪಂಚನಾಮೆ ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ .ಮದ್ದನ ಮನೆ, ಹಳವಳ್ಳಿ ,ಕಮ್ಮಾಣಿ ಪುನರವಸತಿ ಪ್ರದೇಶ ಎಂದರೆ ಸರಿ ಅಲ್ಲಿ ಬಹಳಷ್ಟು ಮನೆಗಳು ಇರುತ್ತದೆ ಎಂದರೆ ಸರಿ . ಈ ಪ್ರಕರಣದಲ್ಲಿ ಸ್ವತಂತ್ರ ಸಾಕ್ಷಿದಾರನ್ನು ಪಡೆದುಕೊಳ್ಳಲು ಯವುದಾದರೂ ತೊಂದರೆ ಇತ್ತಾ ಎಂದರೆ ನಾನು ತನಿಖೆ ಮಾಡಿದ್ದು ನಂತರದಲ್ಲಿ ಚಾಸಾ -1 ರವರು ಚಾಸಾ -2 ಮತ್ತು 3 ರವನ್ನು ಕರೆದು ಪಂಚನಾಮೆ ಮಾಡಿರುತ್ತಾರೆ . ಈ ಪ್ರಕರಣಕ್ಕೆ ಅನೂಕೂಲವಾಗಲಿ ಎಂದು ನಾಶ ಪಡಿಸಿದೆವು ಎಂದು ಹೇಳಲಾದ ಹಂದಿಯ ಪಂಚನಾಮೆ ಮಾಡುವಾಗಲು ಸಹ ಚಾಸಾ -2 ಮತ್ತು 3 ರವರು ನಿಮ್ಮ ಅರಣ್ಯ ಸಿಬ್ಬಂದಿಯಾಗಿದ್ದು ಅವರನ್ನು ಪಂಚರನ್ನಾಗಿ ಕರೆದುಕೊಂಡು ಸುಳ್ಳು ಪಂಚನಾಮೆ ತಯಾರಿಸಿರುತ್ತಿರಿ ಎಂದರೆ ಸರಿಯಲ್ಲ . ಆರೋಪಿತರಿಗೂ ಈ ಪ್ರಕರಣಕ್ಕೂ ಹಾಗೂ ಮುದ್ದೆಮಾಲಿಗೂ ಹಾಗೂ ಹಂದಿಗೂ ಯಾವುದೆ ಸಂಬದ ಇಲ್ಲ ಎಂದರೆ ಸರಿಯಲ್ಲ . ಚಾಸಾ -1 ರವರು ಹಾಕಿದ ಪ್ರಕರಣಕ್ಕೆ ಪೂರಕವಾಗಲಿ ಎಂದು ಕಾಡು ಹಂದಿ ಯನ್ನು ನಾಶ ಪಡಿಸಿದೆವು

ಎಂದು ಪೂರಕವಾದ ಪಂಚನಾಮೆ ತಯಾರಿಸಿ ಸುಳ್ಳು ಸಾಕ್ಷಿ ನುಡಿಯತಿದ್ದೇನೆ ಎಂದರೆ ಸರಿಯಲ್ಲ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ವಿಚಾರಗಳು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.